ಒ ಎಸ್ 48/2013 ಪಿ.ಡಬ್ಲ್ಯೂ 1

ಇಂದು ದಿ: 23.10.2024 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ MJS ವಕೀಲರಿಂದ:

ನನ್ನ ತಂದೆ ಗೇಣಿಗೆ ಜಮೀನುಗಳನ್ನು ಮಾಡುತ್ತಿದ್ದರು ಎಂದು ನನಗೆಮೊದಲಿನಿಂದಲೂ ಗೊತ್ತು. ದಾವಾ ಹಾಕುವಾಗ ಸಹ ನನಗೆ ಗೊತ್ತಿತ್ತು. ಆ ಆಸ್ತಿಗಳು ಯಾವುದು ಎಂದ ಪತ್ತೆ ಮಾಡಲು ಪ್ರಯತ್ನ ಮಾಡಿದ್ದೆನಾ ಎಂದರೆ ಆಸ್ತಿ ಸಂ. 15 ಮಾತ್ರ ಗೊತ್ತಿತ್ತು. ನನ್ನ ತಂದೆ 1 ಎ 33 ಗುಂಟೆ ಜಮೀನನ್ನು ಮಾತ್ರ ಗೇಣಿಗೆ ಮಾಡುತ್ತಿದ್ದಿರಬಹುದು. ಆ ಆಸ್ತಿಯು ಸ.ನಂ. 15 ಮತ್ತು 17 ರ ಆಸ್ತಿಗಳು. ಸ.ನಂ. 17 ರ ಆರ್ ಟಿ ಸಿ ಗಳನ್ನು ನ್ಯಾಯಾಲಯಕ್ಕೆ ಹಾಜರುಮಾಡಿದ್ದೇನೆ. ಸ.ನಂ. 17 ರಲ್ಲಿ 1 ಎ 13 ಗುಂಟೆ ಜಮೀನು ಇದ್ದು ಅದು ವಸಂತಪುರ ಗ್ರಾಮದಲ್ಲಿ ಇದೆ. ಭೂನ್ಯಾಯಾಮಂಡಳಿಯ ಆದೇಶದ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ.

3 ನೇ ಪ್ರತಿವಾದಿ ಕೆ ಸಿದ್ದ ರವರ ಹೆಸರಿನಲ್ಲಿ ಸ.ನಂ. 15/2 ರ ಆರ್ ಟಿ ಸಿ ಬರುತ್ತಿದೆ ಎಂದರೆ ಸರಿ. ಆದರೆ ಅದು ಸರಿಯಲ್ಲ. ಕಳೆದ 11 ವರ್ಷದಿಂದಲೂ 3 ನೆ ಪ್ರತಿವಾದಿ ಹೆಸರಿನಲ್ಲಿ ಬರುತ್ತಿರುವ ಆರ್ ಟಿ ಸಿ ಸರಿ ಇಲ್ಲ ಎಂದು ನಾನು ತಹಶೀಲ್ದಾರರಿಗೆ ಅರ್ಜಿ ಸಲ್ಲಿಸಿ ತಿದ್ದುಪಡಿ ಮಾಡಲು ಕೋರಿಲ್ಲ. ನಾನು ಆ ಜಮೀನುಗಳನ್ನು ನೋಡಿದ್ದೇನೆ. ನಾನು ಮದುವೆ ಆಗಿ 45 ವರ್ಷಗಳಾಗಿವೆ. ಮದುವೆ ಆದ ನಂತರ ಎಲ್ಲಿ ಇದ್ದೆ ಎನ್ನುವ ಪ್ರಶ್ನೆಗೆ ಮೈಸೂರಿನಲ್ಲೂ ಇದ್ದೆ ಮತ್ತು ಊರಿನಲ್ಲೂ ಇದ್ದೆ. ಮೈಸೂರಿನಲ್ಲಿ ಮತ ಚಲಾಯಿಸುತ್ತಿದ್ದೆ ಮತ್ತು ರೇಷನ್ ಅನ್ನೂ ಸಹ ಅಲ್ಲೇ ಪಡೆಯುತ್ತಿದ್ದೆ. ಸ.ನಂ.15 ಮತ್ತು 17 ರ ಆಸ್ತಿಗಳು ಭೂನ್ಯಾಯಮಂಡಳಿಯಿಂದ ನನ್ನ ತಂದೆಗೆ ಬಂದಿದೆ ಎನ್ನುವುದು ಸುಳ್ಳು ಮತ್ತು ಅದರಲ್ಲಿ ನನಗೆ ಹಕ್ಕು ಇಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ:ಇಲ್ಲ.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

sd/-

ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಎಂ.ಎ.ಸಿ.ಟಿ., ನಂಜನಗೂಡು.